ಮಾಹಿತಿಯ ರಾಜಮಾರ್ಗ

ಮೂಲ: ಮಂಜುನಾಥ ಪೆಂಡಕೂರು
ಅನು: ಗುರುಮೂರ್ತಿ ಪೆಂಡಕೂರು

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಮಾಹಿತಿಯ ರಾಜಮಾರ್ಗ

ಮೂಲ: ಮಂಜುನಾಥ ಪೆಂಡಕೂರು
ಅನು: ಗುರುಮೂರ್ತಿ ಪೆಂಡಕೂರು

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

MAAHITIYA RAJAMARGA (information super Highway) by Manjunath Pendakur, Professor and Director, Program on Communication and Development Studies, School of Speech, Northwestern University Evanston, IL 60208. Translated by Gurumurthy Pendakur. Published by The Director, Prasaranga, Kannada University, Hampi, Vidyaranya, Kamalapu-583221 First Impression 1995 PP II+23, Rs.2. 00

ಮಂಟಪಮಾಲೆ ೧೯

ಪ್ರಕಾಶಕರು
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ, ಕಮಲಾಪುರ - ೫೮೩ ೨೨೧

ಬೆಲೆ ರೂ.೨.೦೦

ಮುಖಪುಟ ವಿನ್ಯಾಸ, ಡಿ.ಟಿ.ಪಿ. ಸಂಯೋಜನೆ, ಮುದ್ರಣ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ


INFORMATION
SUPERHIGHWAY
Macintosh SE




ಮಾಹಿತಿಯ ರಾಜಮಾರ್ಗ

ಪ್ರಸ್ತಾವನೆ

ಇಪ್ಪತ್ತೊಂದನೇ ಶತಮಾನದ ಹೊಸ್ತಿಲಲ್ಲಿ ನಿಂತಾಗ ಸಹಜವಾಗಿ ಮುಂಬರಲಿರುವ ಸಮಾಜ ವ್ಯವಸ್ಥೆಯ ಬಗ್ಗೆ ಪ್ರಶ್ನೆಗಳು ಏಳುತ್ತವೆ. ಈ ಶತಮಾನದಲ್ಲಿ ಮನುಕುಲವು ಅಗಾಧ ಸಾಧನೆಗಳನ್ನು ಮಾಡಿದ್ದರೂ ನಾವು ಇಂದು ಅನೇಕ ಬಗೆಹರಿಯಲಾರದ ಸಮಸ್ಯೆಗಳಲ್ಲಿ ಸಿಲುಕಿದ್ದೇವೆ. ಏಶಿಯಾ ಮತ್ತು ಆಫ್ರಿಕಾದ ಅನೇಕ ಜನಾಂಗಗಳಂತೆ ಭಾರತೀಯರು ವಸಾಹತು ಶಾಹಿಯ ಸಂಕೋಲೆಗಳನ್ನು ಮುರಿದೊಗೆದು ಸಾಮಾಜಿಕ ಮತ್ತು ಆರ್ಥಿಕ ಪುನರ್ರಚನೆಯ ಹಾದಿಯಲ್ಲಿ, ಆಧುನಿಕ ಮತ್ತು ಸಮಾಜವಾದಿ ಸಮಾಜ ನಿರ್ಮಾಣದಲ್ಲಿ ತೊಡಗಿದ್ದಾರೆ. ಹಾಳಾದ ಹಂಪೆಯ ಒಡಲಿಂದ ಕನ್ನಡ ವಿಶ್ವವಿದ್ಯಾಲಯದ ರೂಪದಲ್ಲಿ ಹೊಸತೊಂದು ಅಧ್ಯಯನ ಕೇಂದ್ರವು ಮೈತಳೆಯುತ್ತಿದೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ನಮ್ಮಂತಹ ಅನೇಕರಿಗೆ ಈ ಬದಲಾವಣೆಯ ಲಾಭಗಳು ದೊರಕಿವೆ. ಪ್ರಪಂಚದ ಬಂಡವಾಳಶಾಹಿ ಪದ್ಧತಿಯು ಹಾಳಾಗಿ ಹೋಗಿರುವುದನ್ನು ನಾವು ಮರೆಯುತ್ತೇವೆ. ಈ ಪದ್ಧತಿಯ ಮೂಲ ಉದ್ದೇಶವೇ ವೈಯಕ್ತಿಕ ದುರಾಶೆ, ಗಳಿಕೆ ಮತ್ತು ಶೋಷಣೆಗಳಾಗಿರುವುದರಿಂದ ಯಾವಾಗಲು ಅದು ಸಮಸ್ಯೆಗಳಿಗೆ ಕಾರಣವಾಗುತ್ತದೆ. ಇಂತಹ ಆರ್ಥಿಕ ಪರಿಸ್ಥಿತಿಯು ಸದಾ ಶೋಧಗಳ ಮೇಲೆ ಆಧಾರಪಟ್ಟಿರುತ್ತದೆ. ಅಲ್ಲದೇ ತನ್ನ ಹುಳುಕುಗಳನ್ನು ಮುಚ್ಚಿ ಹಾಕುವ ಮತ್ತು ಯಥಾಸ್ಥಿತಿಯನ್ನು ಉಳಿಸಿಕೊಳ್ಳುವ ಪ್ರಚಾರವನ್ನು ಹಮ್ಮಿಕೊಂಡಿರುತ್ತದೆ.

ಕಳೆದ ಇಪ್ಪತ್ತು ವರುಷಗಳ ಅವಧಿಯಲ್ಲಿ ಎಲ್ಲಾ ಸಂಕಟ ಪರಿಸ್ಥಿತಿಯ ಸೂಕ್ಷ್ಮ ಸಮಯಗಳಲ್ಲಿ "ಔದ್ಯೋಗಿಕೋತ್ತರ ಸಮಾಜ", "ಮಾಹಿತಿ ಸಮಾಜ" ಮತ್ತು "ಆರಾಮ ಸಮಾಜ"ದಂತಹ ಮಾತುಗಳು ಬಳಕೆಗೆ ಬಂದಿವೆ. ಬಂಡವಾಳಶಾಹಿ ಸಮೂಹ ಮಾಧ್ಯಮದಲ್ಲಿ ಈ ಮಾತುಗಳಿಗೆ


INFORMATION
PERHIGHWAY
INFORMATION REVOLUTION !!

ಮಹತ್ವ ನೀಡಲಾಗಿದೆ. ಈ ಪದಗಳೆಲ್ಲಾ ಪಾಶ್ಚಿಮಾತ್ಯ ಸಮಾಜದಲ್ಲಿ ಮುಂಬರಲಿರುವ ಸಮಾಜ ಪರಿಸ್ಥಿತಿಯ ಕನಸುಗಳಾಗಿವೆ. ಮುಂಬರಲಿರುವ ವ್ಯವಸ್ಥೆಯಲ್ಲಿ ಎಲ್ಲಾ ಉತ್ಪಾದನಾ ಕ್ರಿಯೆಯು ಮಾಹಿತಿ ವಿಭಾಗದಲ್ಲಿಯೇ ನಡೆಯಲಿದೆ. ಮಾಹಿತಿಯನ್ನು ಸಂಗ್ರಹಿಸುವುದು ಪರಾಮರ್ಶಿಸುವುದು, ಸಂಚಲಿಸುವುದು ಮತ್ತು ಮಾಹಿತಿಯನ್ನು ಉತ್ಪಾದಿಸುವುದು ಅವಿರತವಾಗಿ ನಡೆಯಲಿದೆ. ಈ ಅರ್ಥದಲ್ಲಿ ಮಾಹಿತಿಯೆಂದರೆ - ಹಣಕಾಸಿನ ವ್ಯವಹಾರ, ಕೊಡು-ಕೊಳ್ಳುವಿಕೆ, ವಿದ್ಯಾಭ್ಯಾಸ, ವಿನೋದಾವಳಿ, ದೂರವಾಣಿ ಮತ್ತು ತತ್ಸಂಬಂಧಿತ ಸಂಪರ್ಕ ಮಾಧ್ಯಮಗಳು. ಡೇನಿಯಲ್ ಬೆಲ್‌ನಂತಹ ಪ್ರಾಜ್ಞರು ಇಂತಹ ಮಾಹಿತಿ ಸಮಾಜದ ಬಗ್ಗೆ ಬರೆಯುತ್ತಾ ಈ ವಿಭಾಗದಲ್ಲಿಯ ಕೆಲಸಗಾರರು ಹೆಚ್ಚು ಆರಾಮವಾಗಿ ಕೆಲಸ ಮಾಡುತ್ತಾ ಹೆಚ್ಚು ಉತ್ತಮ ರೀತಿಯಲ್ಲಿ ಬದುಕಬಹುದಾದ ಸಂದರ್ಭವನ್ನು ಕಂಡರು ಎಂದರು. ಈ ಕನಸು ಪಶ್ಚಿಮದಲ್ಲಿ ನನಸಾಗಲಿಲ್ಲ. ನಿಜಕ್ಕೂ ಸಂಭವಿಸಿದ್ದೇನೆಂದರೆ - ಸಾಮಾನ್ಯ ಜನರು ಇನ್ನಷ್ಟು ನಿರ್ಗತಿಕರಾದದ್ದು, ಉದ್ಯೋಗದಲ್ಲಿ ಅನಿಶ್ಚಿತತೆ, ಕಾರ್ಮಿಕರ ಮಕ್ಕಳಿಗೆ ಕೈಗೆಟುಕದ ವಿದ್ಯಾಭ್ಯಾಸ, ವರ್ಣದ್ವೇಷ ಮತ್ತು ವೈಯಕ್ತಿಕ ಹಾನಿಯ ಆಘಾತ, ಮತ್ತು ಅಮೇರಿಕೆಯ ಎಲ್ಲಾ ನಗರಗಳಲ್ಲಿ ಬೀದಿ ಬೀದಿಯಲ್ಲಿ ಹಿಂಸೆಯ ಹೆಚ್ಚಳ ಎರಡು ಪ್ರಪಂಚ ಯುದ್ಧಗಳ ಮತ್ತು ಅನೇಕ ಸ್ಥಳೀಯ ಯುದ್ಧಗಳ ಆಧಾರದ ಮೇಲೆ ಕಟ್ಟಲಾದ ಬೃಹತ್ ಆರ್ಥಿಕ ವ್ಯವಸ್ಥೆಯನ್ನು ಸದ್ಯದ ಪ್ರಪಂಚ ಪರಿಸ್ಥಿತಿಯಲ್ಲಿ ಹೇಗೆ ಹತೋಟಿಗೆ ತರಬೇಕೆಂಬ ಬಗ್ಗೆ ಅಮೇರಿಕೆಯ ಪ್ರಭುಗಳು ಮತ್ತು ಪ್ರಾಜ್ಞರಲ್ಲಿ ಗೊಂದಲವೇ ಇದೆ. ಆಶೆಬುರುಕುತನ ಮತ್ತು ಅಂತಸ್ತುಗಳ ಆಧಾರದ ವ್ಯವಸ್ಥೆಯಲ್ಲಿ ಒಂದು ಗುರಿಗಾಗಿ ಸಾರ್ವಜನಿಕ ಅಭಿಪ್ರಾಯವನ್ನು ರೂಢಿಸುವುದಾಗಲೀ, ರಾಷ್ಟ್ರೀಯ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದಾಗಲೀ, ಹೊರಗಿನ ಗಂಡಾಂತರ ಅಥವಾ ಶತ್ರುವಿಲ್ಲದಾಗ ಕಷ್ಟಸಾಧ್ಯ.



COAXIAL CABLE



TWISTED-PAIR (TELEPHONE LINE)



FIBER OPTIC

ಈಗ ಮತ್ತೊಮ್ಮೆ ನಾವು ಸಂಕಟಪರಿಸ್ಥಿತಿಯಲ್ಲಿದ್ದೇವೆ. ಅದಕ್ಕಾಗಿ ಮಾಹಿತಿ ಶಬ್ದವನ್ನುಪಯೋಗಿಸಿ ಹೊಸ ಘೋಷಣೆ ಬಂದಿದೆ ಮತ್ತು ಅದಕ್ಕೆ ಪ್ರಪಂಚದ ಸಮೂಹ ಮಾಧ್ಯಮಗಳಿಂದ ಬೆಂಬಲವೂ ದೊರೆತಿದೆ. ಮಾಹಿತಿ ರಾಜಮಾರ್ಗ ಕೆಲ ಆರಿಸಿದ ಜನರಿಗಾಗಿ ತಾಂತ್ರಿಕ ಸಂಶೋಧನೆಗಳ ಮೂಲಕ ಲಾಭೋದ್ದೇಶದ ಬಂಡವಾಳಶಾಹಿ ಕನಸುಗಳಿಂದ ತುಂಬಿದೆ.

ಒಂದು ವ್ಯಾಖ್ಯಾನ

ಮಾಹಿತಿ ರಾಜಮಾರ್ಗ ಎಂಬ ಪದ ಸಮ್ಮುಚ್ಚಯಕ್ಕೆ ಸಾಕಷ್ಟು ಪ್ರಚಾರ ಶಕ್ತಿಯಿದೆ. ಈ ಮಾತು ಕೇಳಿದೊಡನೆ ವೇಗ, ದಕ್ಷತೆ ಮತ್ತು ಎಲ್ಲರಿಗೂ ಸ್ವಾತಂತ್ರ್ಯ ಎಂಬ ಮಾತುಗಳು ನೆನಪಾಗುತ್ತವೆ. ಈ ಎಲ್ಲಾ ಪ್ರಭಾವೀ ಶಬ್ದಗಳು ಸಾಮಾನ್ಯ ಅಮೇರಿಕನ್ನರಿಗೆ ಅತ್ಯಂತ ಆಕರ್ಷಕವಾಗುತ್ತವೆ. ಮಾಹಿತಿಯ ರಾಜಮಾರ್ಗದಲ್ಲಿ ನಿತ್ಯದ ಜಂಜಾಟದಿಂದ ಬಹುದೂರ, ಕೆಲಸ, ರಾಜಕೀಯಗಳ ಗೊಂದಲದಿಂದ ದೂರ, ಅತ್ಯಂತ ವೇಗದಲ್ಲಿ ಚಲಿಸಬಹುದಾದ ಸಾಧ್ಯತೆಗಳು ತಮ್ಮ ಮಕ್ಕಳ ಬದುಕಿನ ಬಗ್ಗೆ ಯೋಚಿಸುವ ಅಮೇರಿಕನ್ನರಿಗೆ ಅತ್ಯಂತ ಚೇತೋಹಾರಿ ಭಾವಲೋಕದ ವಿಷಯಗಳಾಗಿವೆ. ಮಾಹಿತಿ ರಾಜಮಾರ್ಗ ಎಂಬ ಈ ಮಾತು ಅಮೇರಿಕೆಯ ಬೇರೆ ಬೇರೆ ರಂಗದಲ್ಲಿ ಬೇರೆ ಬೇರೆ ಅರ್ಥಗಳನ್ನು ಪಡೆಯುತ್ತದೆ. ಎರಡು ವರುಷಗಳ ಕೆಳಗೆ ನನ್ನ ಕೆಲ ವಿದ್ಯಾರ್ಥಿಗಳು ಸದಾ ಈ ಬಗ್ಗೆ ಪ್ರಚಾರ ನಡೆಸಿದ್ದ ದೊಡ್ಡ ಕಂಪನಿಗಳಿಗೆ ಈ ಬಗ್ಗೆ ಏನನಿಸುತ್ತದೆಂದು ಕಂಡು ಹಿಡಿಯಲು ಪ್ರಯತ್ನಿಸಿದರು. ವಾರ್ನರ್ ಬ್ರದರ್ಸ್ ನಂತಹ ರಾಕ್ಷಸ ಸಂಸ್ಥೆಯ ಸಾಮಾನ್ಯ ಅಧಿಕಾರಿಗಳು ಈ ಬಗ್ಗೆ ಏನೂ ಹೇಳಲಾರದಾದರು. ಅವರು ತಮ್ಮ ಕಂಪನಿಯ ಅಧ್ಯಕ್ಷರಿಗೇ ನಮ್ಮ ಪ್ರಶ್ನಾವಳಿಯನ್ನು ಕಳಿಸುತ್ತಿದ್ದರು. ಹೋದ ವರ್ಷ ಅಮೇರಿಕೆಯ ಉಪಾಧ್ಯಕ್ಷ ಶ್ರೀ ಅಲ್ ಗೋರ್ - ನ್ಯಾಶನಲ್ ಇನಫರ್ ಮೇಷನ್ ಇನ್ಫ್ರಾಸ್ಟ್ರಕ್ಚರನ್ನು ಉದ್ಘಾಟಿಸಿದರು. ಈ ಸಂಸ್ಥೆಯು ಖಾಸಗಿ ದೂರವಾಣಿ ಕಂಪನಿಗಳ ದೂರವಾಣಿ



ಸಂಪರ್ಕಗಳನ್ನು ಮನರಂಜನೆಗಾಗಿ, ಮಾಹಿತಿಗಾಗಿ, ಮನೆ ಮತ್ತು ಕಂಪನಿಗಳ ಸೇವೆಗಾಗಿ ಉಪಯೋಗಿಸಲು ಉದ್ದೇಶಿಸುತ್ತದೆ. ಈ ಕಂಪನಿಗೆ ಆರ್ಥಿಕ ಮತ್ತು ಕಾನೂನಿನ ಆಧಾರವನ್ನು ಅಮೇರಿಕಾ ಸರಕಾರವೇ ನೀಡುತ್ತದೆ. ಐವತ್ತು ವರುಷಗಳ ಹಿಂದೆ ಸರಕಾರದ ಹಣದಿಂದ ರಾಷ್ಟ್ರೀಯ ಹೆದ್ದಾರಿಗಳನ್ನು ನಿರ್ಮಿಸಿ ಕಾರು, ಲಾರಿ, ಉಕ್ಕು, ಅಲ್ಯುಮಿನಿಯಂ ಉದ್ಯಮಗಳಿಗೆ ಚಾಲನೆ ನೀಡಿದಂತೆ ಶ್ರೀ ಅಲ್ ಗೋರ್ ಯೋಜನೆಯಿಂದ ಸಾರ್ವಜನಿಕ ಹಣವನ್ನು ಬಳಸಿ ದೊಡ್ಡ ಕಂಪನಿಗಳಿಗೆ ಮತ್ತು ಶ್ರೀಮಂತರಿಗೆ ಅನುಕೂಲ ಮಾಡಿಕೊಡಲಾಗುತ್ತದೆ.

ಮಾಹಿತಿ ರಾಜಮಾರ್ಗದ ಇನ್ನಷ್ಟು ವಿವರವಾದ ವಿಶ್ಲೇಷಣೆ ಮಾಡೋಣ. ಇದು ಯಥಾರ್ಥವಾಗಿ ಒಂದು ಸಂಘಟಿತ ಸಂಪರ್ಕಜಾಲ ಮನೆಗಳನ್ನು, ಕಾರ್ಪೋರೇಶನ್ ಗಳನ್ನು ವಿಶ್ವವಿದ್ಯಾಲಯಗಳನ್ನು, ಸರಕಾರಿ ಕಛೇರಿಗಳನ್ನು, ಸಂಶೋಧನ ಸಂಸ್ಥೆಗಳನ್ನು ಹೀಗೆ ಹಲವಾರು ಸಂಸ್ಥೆಗಳನ್ನು ಒಂದೇ ಸಂಪರ್ಕಜಾಲದಲ್ಲಿ ತರಬಹುದು. ಈ ಜಾಲವು ಸ್ಥಳೀಯವಾಗಿ ಪ್ರಾಂತೀಯವಾಗಿ, ರಾಷ್ಟ್ರಮಟ್ಟದಲ್ಲಿ ಅಥವಾ ಅಂತರರಾಷ್ಟ್ರೀಯ ಮಟ್ಟದಲ್ಲಿ ಇರಬಹುದು. ಈ ಜಾಲದ ಮೂಲಕ ಸಂದೇಶಗಳನ್ನು, ಅಂಕಿ ಸಂಖ್ಯೆಗಳನ್ನು, ಚಿತ್ರಗಳನ್ನು ಮತ್ತೆಲ್ಲ ತರಹದ ಧ್ವನಿ ಸಂಕೇತಗಳನ್ನು ಕಳಿಸಬಹುದು ಮತ್ತು ತರಿಸಬಹುದು.

ಈ ಎಲ್ಲಾ ತಾಂತ್ರಿಕತೆಯ ಮೂಲ ವಸ್ತು ಚಿಕ್ಕದಾದ ಬಲಾಢ್ಯವಾದ ಕಂಪ್ಯೂಟರ್. ಜೊತೆಜೊತೆಗೆ ಸುಧಾರಿತವಾದ ಅನೇಕ ಚಾನೆಲ್ ಗಳಿಗೆ ಅವಕಾಶ ನೀಡಬಲ್ಲ ವಾಹಕ ತಂತಿಗಳು ಸಂಪರ್ಕ ಏರ್ಪಡಿಸುತ್ತವೆ. ಕೂದಲೆಳೆ ಗಾತ್ರದ ಆಪ್ಟಿಕ್ ಫೈಬರ್ ವಾಹಕವು ೪೦ ಸಾವಿರ ಚಾನಲ್ ಗಳನ್ನು ನಿರ್ವಹಿಸಬಲ್ಲದು. ಸದ್ಯ ಅಮೇರಿಕೆಯಲ್ಲಿ ಖಂಡತುಂಡವಾದ ಸಂಪರ್ಕಜಾಲವಿದೆ. ಕೇಬಲ್ ಟಿ.ವಿ ಉಪಗ್ರಹ ಟಿ.ವಿ. ಮತ್ತು ಪ್ರಸಾರ ಮಾಧ್ಯಮಗಳು ಅನೇಕ ದೃಕ್ ಶ್ರವಣ ಕಾರ್ಯಕ್ರಮಗಳನ್ನು ಮನೆಗಳಿಗೆ,

ಕಛೇರಿಗಳಿಗೆ ಮತ್ತು ಸೈನಿಕರ ನೆಲೆಗಳಿಗೆ ತಲುಪಿಸುತ್ತವೆ. ಅಮೇರಿಕೆಯ ೯೪.೭ ಮಿಲಿಯ ಮನೆಗಳ ಪೈಕಿ ಶೇಕಡಾ ೯೮ ರಷ್ಟು ಮನೆಗಳಿಗೆ ಕೇಬಲ್ ಟಿ.ವಿ.ಸಂಪರ್ಕ ಕಲ್ಪಿಸಬಹುದು. ಸುಮಾರು ಶೇಕಡಾ ೬೨ ರಷ್ಟು ಮನೆಗಳಿಗೆ ಈಗಾಗಲೇ ಸಂಪರ್ಕವಿದೆ. ಜರ್ಮನಿ, ಫ್ರಾನ್ಸ್, ಜಪಾನ್ ಮತ್ತು ಬ್ರಿಟನ್‌ಗಿಂತ ಈ ಸಂಖ್ಯೆ ಹೆಚ್ಚೇ ಇದೆ. ಅಮೇರಿಕೆಯಲ್ಲಿ ಈಗ ಎಲ್ಲ ಮನೆಗಳಿಗೆ ದೂರವಾಣಿ ಸಂಪರ್ಕವಿದೆ. ಕಂಪ್ಯೂಟರ್ ಬೆಲೆಗಳು ಇಳಿಯುತ್ತಿದ್ದಂತೆ ಮನೆಗೊಂದು ಕಂಪ್ಯೂಟರ್ ಬರುತ್ತಿದೆ. ಈಗಾಗಲೇ ಎಷ್ಟೊಂದು ಕಂಪನಿಗಳು ಮನೆ ಮನೆಗೆ ಆನ್ ಲೈನ್ ಸರ್ವಿಸ್ ಕೊಡುತ್ತಿದ್ದಾರೆ. ಈ ಸೇವೆಗಳೆಂದರೆ ಮನೆಯಲ್ಲಿಯೇ ಕೂತು ಖರೀದಿ ಮಾಡುವುದು. ಬ್ಯಾಂಕ್ ವ್ಯವಹಾರ, ಸಂಶೋಧನೆ, ಎಲೆಕ್ಟ್ರಿಕ್ ಅಂಚೆ, ಬುಲೆಟಿನ್ ಬೋರ್ಡ್, ವಿಡಿಯೋ ಸೆಕ್ಸ್ ಇತ್ಯಾದಿ. ಈ ಬಗ್ಗೆ ಮತ್ತೆ ಕೂಲಂಕುಷವಾಗಿ ಚರ್ಚಿಸೋಣ. ಶ್ರೀ ಅಲ್ ಗೋರ್ ಅವರ ಯೋಜನೆ ಏನೆಂದರೆ ಈಗಿರುವ ಎಲ್ಲಾ ಸಂಪರ್ಕ ಜಾಲಗಳನ್ನು ಖಾಸಗಿ ಕಂಪನಿಗಳ ಮೂಲಕ ಒಂದು ರಾಷ್ಟ್ರೀಯ ಜಾಲದಲ್ಲಿ ಸಂಘಟಿಸುವುದು. ಹೊಸ ಕೇಬಲ್ ಹಾಕುವುದು ತುಂಬಾ ದುಬಾರಿ ಕೆಲಸ. ಈಗಾಗಲೇ ಅಸ್ತವ್ಯಸ್ತವಾಗಿರುವ ಅಮೇರಿಕೆಯ ಆರ್ಥಿಕ ಸ್ಥಿತಿಯಲ್ಲಿ ಖಾಸಗಿ ಕಂಪನಿಗಳು ದುಬಾರಿ ವೆಚ್ಚದ ಆಪ್ಟಿಕಲ್ ಫೈಬರ್ ವಾಹಕಜಾಲ ನಿರ್ಮಿಸಲು ಮುಂದೆ ಬರಲಿಕ್ಕಿಲ್ಲ. ಆದ್ದರಿಂದ ರಾಷ್ಟ್ರೀಯ ಕಾರಣ ಹೇಳಿ ಸರಕಾರದ ಹಣವನ್ನು ಉಪಯೋಗಿಸಿ ಈ ದೊಡ್ಡ ಕಂಪನಿಗಳಿಗೆ ಸಹಾಯ ಮಾಡುವುದೇ ಶ್ರೀ ಅಲ್ ಗೋರ್ ಯೋಜನೆಯ ಉದ್ದೇಶ. ಕೆಲ ಸಾರ್ವಜನಿಕ ಸಂಪರ್ಕಜಾಲಗಳನ್ನು ಈ ಕಾರಣಕ್ಕಾಗಿ ಖಾಸಗೀಕರಣ ಮಾಡುವ ಯೋಜನೆಯೂ ಇದೆ.

ಕಳೆದ ಹದಿನೈದು ವರುಷಗಳಲ್ಲಿ ಅಮೇರಿಕಾ ಸರಕಾರವು ಮಾಹಿತಿ ವಲಯದಲ್ಲಿ ನಿರ್ವಹಿಸುತ್ತಿರುವ ಪಾತ್ರದ ಬಗ್ಗೆ ಎರಡು ಮಾತು. ೧೯೮೦ ರಲ್ಲಿ ರೋನಾಲ್ಡ್ ರೇಗನ್ ಅಧ್ಯಕ್ಷರಾದೊಡನೆ ಅಮೇರಿಕೆಯ ಆರ್ಥಿಕ

ರಂಗದ ಕೆಲ ವಲಯಗಳಲ್ಲಿ ಸರಕಾರದ ಪಾತ್ರವನ್ನು ಕಡಿಮೆಗೊಳಿಸುವ ಕೆಲಸ ಸುರುವಾಯಿತು. ಸರ್ಕಾರಿ ಹತೋಟಿಯ ರದ್ದತಿಯ ಕ್ರಮವೆಂದು ಆರಂಭವಾದ ಈ ಕ್ರಿಯೆಯಿಂದ ಖಾಸಗೀ ಕಂಪನಿಗಳ ಲಾಭಕೋರತನಕ್ಕೆ ಹಾಕಿದ್ದ ಕಡಿವಾಣಗಳು ಸಡಿಲಿದವು. ಕಾರ್ಮಿಕರ, ಬಡವರ ಮತ್ತು ಅಮೇರಿಕಾದ ದುರ್ಬಲರ ಬಗ್ಗೆ ಅವರು ವಹಿಸಬೇಕಾಗಿದ್ದ ಕಾಳಜಿಯನ್ನು ರದ್ದುಗೊಳಿಸಲಾಯಿತು. ಈ ಎಲ್ಲಾ ಕ್ರಮಗಳಿಂದ ಮಾಹಿತಿ ಮತ್ತು ಸಂಪರ್ಕವಲಯವು ಖಾಸಗೀ ಬಂಡವಾಳದ ಅನುಕೂಲಕ್ಕೆ ಮಾರ್ಪಟ್ಟು ಅಮೇರಿಕೆಯ ಔದ್ಯೋಗಿಕ ರಂಗವು ದೊಡ್ಡ ಗಲಿಬಿಲಿಗೆ ಬಲಿಯಾಯಿತು. ಬಂಡವಾಳ ರಂಗದಲ್ಲಿ ಪ್ರಾರಂಭವಾದ 'ಲಿವರೇಜ ಬಯಔಟ್' ವಿಧಾನದಿಂದ ಅನೇಕ ಸಣ್ಣ ಮತ್ತು ಮಧ್ಯಮಗಾತ್ರದ ಕಂಪನಿಗಳು ಮುಳುಗಿ ಹೋದರೆ, ಕೆಲ ದೊಡ್ಡ ಕಾರ್ಪೋರೇಷನ್ ಗಳು ತಮ್ಮ ಅಮೂಲ್ಯ ಆಸ್ತಿಗಳನ್ನು ಕಳೆದುಕೊಂಡವು. ಚಾಣಾಕ್ಷರಾದ ಷೇರ್ ಬ್ರೋಕರ್ ಗಳು, ವಕೀಲರು ಯಾವುದೇ ಕಾನೂನನ್ನು ಮುರಿಯದೇ ಎಲ್ಲವನ್ನೂ ಸಾಧಿಸಿ ಜೀವಮಾನವೆಲ್ಲ ಒಂದು ಕಂಪನಿಗಾಗಿ ದುಡಿದ ಅನೇಕರನ್ನು ನಿರ್ಗತಿಕರನ್ನಾಗಿ ಮಾಡಿದರು. ಅಮೇರಿಕೆಯ ಬಂಡವಾಳಶಾಹಿ ಸ್ಮಶಾನದಲ್ಲಿ ಭಾರತದ ಹರ್ಷದ್ ಮೆಹತಾನಂತೆ, ಐವಾನ್ ಬಾಸ್ಕಿ ಮತ್ತು ಕಾರ್ಲ ಮಿಲ್ಲಿಕೆನ್ ಜೈಲು ಅನುಭವಿಸಿ ಚಿರಸ್ಮರಣೀಯರಾಗಿದ್ದಾರೆ. ರೇಗನ್ ಸರಕಾರ ಕೈಗೊಂಡ ನಿಬಂಧನೆಗಳ ಸಡಿಲಗೊಳಿಸುವ ಕಾರ್ಯಕ್ರಮದ ಮತ್ತೊಂದು ಮಗ್ಗುಲೇ ಬೇರೆ ಬೇರೆ ಬಂಡವಾಳಶಾಹಿ ಗುಂಪುಗಳು ಸ್ಪರ್ಧೆಯಿಂದ ಸಂಪರ್ಕಜಾಲಗಳನ್ನು ನಿರ್ಮಿಸುವ ಸಾಧ್ಯತೆಗಳನ್ನು ಹೆಚ್ಚಿಸಿದೆ. ಉದಾಹರಣೆಗೆ ಚಿಕಾಗೋದಲ್ಲಿ ಪ್ರಾಯೋಗಿಕವಾಗಿ ಸ್ಥಳೀಯ ಕೇಬಲ್, ದೂರವಾಣಿ ಮತ್ತಿತರ ಮನೋರಂಜನೆ ಮಾಧ್ಯಮಗಳನ್ನು ಒಂದೇ ಜಾಲದಲ್ಲಿ ತಂದು ೫೦೦ ಚಾನಲ್‌ಗಳ ಮೂಲಕ ಆಟಪಾಠ, ಮನೋರಂಜನೆ, ಟಪಾಲು, ಕೊಡುಕೊಳ್ಳುವಿಕೆ, ಭದ್ರತೆ ಮುಂತಾದ

ಸೇವೆಗಳನ್ನೊದಗಿಸುವ ಪ್ರಯತ್ನ ನಡೆದಿದೆ.

ಈ ಎಲ್ಲಾ ಸೇವೆಗಳ ಹಿಂದಿರುವ ಯೋಜನೆಗಳು ತೀರಾ ಸರಳ ಮತ್ತು. ಉಪಯೋಗಕಾರಿ ಉದಾಹರಣೆಗೆ ಆನ್ ಲೈನ್ ಸರ್ವೀಸ್. ನಮ್ಮ ಮನೆಯ ಕಂಪ್ಯೂಟರ್ ವಿಶ್ವವಿದ್ಯಾಲಯಕ್ಕೆ ಮೊಡಮ್ ಮೂಲಕ ಮುಖ್ಯ ಕಂಪ್ಯೂಟರ್ ದ್ವಾರ ಸಂಪರ್ಕ ಪಡೆದಿದೆ. ಮೊಡಮ್ ದೂರವಾಣಿ ಸಂಪರ್ಕದ ಮೂಲಕ ಕಂಪ್ಯೂಟರ್ ಭಾಷೆಯಲ್ಲಿ ೦ ಯಿಂದ ೧ ರ ವರೆಗೆ ಮಾಹಿತಿಯನ್ನು ಸ್ವೀಕರಿಸುತ್ತದೆ ಮತ್ತು ನೀಡುತ್ತದೆ. ವಿಶ್ವವಿದ್ಯಾಲಯದ ಮುಖ್ಯ ಕಂಪ್ಯೂಟರ್ ನಾನಾವಿಧವಾದ ಸೇವೆಗಳನ್ನು ಪಡೆಯಲು ಹೆಬ್ಬಾಗಿಲಾಗುತ್ತದೆ. ಈ ಮುಖಾಂತರ ವಿಶ್ವವಿದ್ಯಾಲಯದ ಗ್ರಂಥಾಲಯ, ಬೇರೆ ಬೇರೆ ಪತ್ರಿಕೆಗಳು; ಕಾಂಗ್ರೇಸ್‌ನ ಗ್ರಂಥಾಲಯ ಮತ್ತು ದೇಶದ ಪ್ರಮುಖ ಸಂಪರ್ಕಜಾಲಗಳಾದ 'ಇಂಟರ್‌ನೆಟ್ ಮತ್ತು ಪೀಸ್‌ನೆಟ್' ಗೆ ನಾವು ಸಂಪರ್ಕ ಪಡೆಯುತ್ತೇವೆ. ಪ್ರಪಂಚದಾದ್ಯಂತ ಸಾವಿರಾರು ವಿಶ್ವವಿದ್ಯಾಲಯಗಳು ಭಾರತದ IITಗಳು ಇಂಟರ್‌ನೆಟ್ ಜಾಲದಲ್ಲಿ ಸೇರಿಕೊಂಡಿವೆ. ಪೀಸ್ ನೆಟ್ ಲಾಭೋದ್ದೇಶವಿಲ್ಲದ ಸಂಸ್ಥೆ. ಈ ಸಂಪರ್ಕಜಾಲದ ಮೂಲಕ ಅಂಚೆ ಸೇವೆ, ಪರಸ್ಪರ ಮಾಹಿತಿ ವಿನಿಮಯ, ಮತ್ತು ಅನೇಕ ವಿಷಯಗಳ ಬಗ್ಗೆ ತಜ್ಞರು ಮತ್ತು ಕ್ರಿಯಾಶೀಲರು ಚರ್ಚೆ ನಡೆಸಬಹುದಾಗಿದೆ. ಇಂಟರ್‌ನೆಟ್ ನೀಡುವ ಎಲೆಕ್ಟ್ರಾನಿಕ್ ಮೇಲ್ ಸೇವೆಯಿಂದ ನಾನು ಬೇರೆ ಬೇರೆ ದೇಶಗಳಲ್ಲಿರುವ ಐವತ್ತಕ್ಕೂ ಹೆಚ್ಚು ತಜ್ಞರೊಂದಿಗೆ ಸದಾ ಸಂಪರ್ಕದಲ್ಲಿರುತ್ತೇನೆ. ಈ ಅನುಕೂಲದ ಮೂಲಕ ಇಂಟರ್ ನ್ಯಾಶನಲ್ ಅಸೋಸಿಯೇಷನ್ ಫಾರ್ ಮಾಸ್ ಕಮ್ಯುನಿಕೇಷನ್ ರಿಸರ್ಚ್ ಸಂಸ್ಥೆಯ ಹಿರಿಯರನ್ನು ಸಂಪರ್ಕಿಸಬಹುದಾಗಿದೆ. IAMOR ಸಂಸ್ಥೆಯು ಇಂಟರ್‌ನೆಟ್ ಮೂಲಕ ತನ್ನ ಸದಸ್ಯರಿಗಾಗಿ ಪ್ರತ್ಯೇಕ ಟಪಾಲು ಪೆಟ್ಟಿಗೆಯನ್ನು ಇರಿಸಿದೆ.

ಮನೆಯಲ್ಲಿ ಕೂತು ಸಾಮಾನು ಖರೀದಿಸುವುದು ಅಮೇರಿಕೆಯಲ್ಲಿ

ತುಂಬಾ ಪ್ರಚಾರದಲ್ಲಿ ಬರುತ್ತಿದೆ. ನನ್ನ ಮಗಳು ಸುಮನ್ (೧೮ ವರ್ಷ) ಪೀಪಾಡ್ ಎಂಬ ಸಂಸ್ಥೆಯಲ್ಲಿ ಅರೆಕಾಲಿಕ ಕೆಲಸ ಮಾಡುತ್ತಾಳೆ. ಪೀಪಾಡ್ ಮನೆಯಲ್ಲಿ ಕೂತು ಖರೀದಿಸುವ ಸೇವೆ ನೀಡುತ್ತದೆ. ಸ್ವಲ್ಪ ಪ್ರವೇಶಧನ ನೀಡಿ ಈ ಸಂಸ್ಥೆಗೆ ಸದಸ್ಯರಾಗಬಹುದು. ಪೀಪಾಡ್ ಸಂಸ್ಥೆ 'ಜುವೆಲ್' ಎಂಬ ಕಿರಾಣಿ ಅಂಗಡಿಗೆ ಸಂಪರ್ಕ ಹೊಂದಿದೆ. ಪೀಪಾಡ್ ನೀಡುವ ಕಂಪ್ಯೂಟರ್ ಪ್ರೊಗ್ರ್ಯಾಮ್ ಹಾಕಿ ನಮ್ಮ ಕಂಪ್ಯೂಟರ್ ಪರದೆಯ ಮೇಲೆ ಜುವೆಲ್ ಸ್ಟೋರಿನ ಮೂಲೆ ಮೂಲೆಯ ಅಲಮಾರುಗಳಲ್ಲಿ ಏನೇನು ವಸ್ತುಗಳು ಸಿಗುತ್ತವೆ - ಎಂದು ನೋಡಬಹುದು. ಅಲ್ಲಿರುವ ನೂರಾರು ತರಹೆ ಬ್ರೆಡ್ ಗಳನ್ನು ಅವುಗಳ ಆಕಾರ ಬ್ರ್ಯಾಂಡ್ ನೋಡಿ ನನಗೆ ಬೇಕಾಗುವ ಬ್ರೆಡ್ ಬಗ್ಗೆ ನಿರ್ಧರಿಸಬಹುದು. ಅದೇ ರೀತಿ ನನಗೆ ಬೇಕಾದ ಹಾಲು, ಕಾಯಿಪಲ್ಯೆ, ಅಕ್ಕಿ, ಟೂತ್ ಪೇಸ್ಟ್ , ಔಷಧಿ, ಮಾಂಸ, ಪೆಪರ್ ಮೆಂಟ್, ಪತ್ರಿಕೆ, ಹೂವು, ದಿನಪತ್ರಿಕೆ ಮತ್ತು ಪಾನೀಯಗಳನ್ನು ಆರಿಸಬಹುದು. ಈ ರೀತಿ ಆಯ್ಕೆಯನ್ನು ಕಾಲುಗಂಟೆ ಸಮಯದಲ್ಲಿ ಮುಗಿಸಬಹುದು. ಇದರಿಂದ ನಾನು ಕಾರಿನಲ್ಲಿ ಸ್ಟೋರಿಗೆ ಹೋಗುವುದು, ವಸ್ತುಗಳನ್ನು ಆರಿಸುವುದು, ಬಿಲ್ ಮಾಡಿಸುವಲ್ಲಿ ಸರದಿ ಕಾಯುವುದು, ಮುಂತಾಗಿ ಸಾಕಷ್ಟು ಸಮಯ ಮತ್ತು ತಲೆನೋವು ತಪ್ಪುತ್ತದೆ. ನಾನು ತಿಳಿಸಿದ ವಸ್ತುಗಳನ್ನು ಸುಮನ್‌ನಂತಹ ಕೆಲಸಗಾರರು ಆರಿಸಿ ಸರದಿಯಲ್ಲಿ ಕಳಿಸುತ್ತಾರೆ. ಅನಂತರ ಡಿಲೆವರಿ ವಾಹನದಲ್ಲಿ ಸರಕುಗಳು ನನ್ನ ಮನೆಗೆ ಬಿಲ್ ಸಮೇತ ತಲುಪುತ್ತವೆ. ಈ ತರಹದ ಸೇವೆಯಿಂದ ವೃದ್ಧರಿಗೆ, ಸಮಯವಿಲ್ಲದ ಕೆಲಸಸ್ಥರಿಗೆ, ವಾಹನ ನಡೆಸಲಾರದವರಿಗೆ, ಮತ್ತನೇಕರಿಗೆ ತುಂಬಾ ಸಹಾಯವಾಗಿದೆ.

ಅನೇಕ ಬ್ಯಾಂಕುಗಳು ಟೆಲಿಬ್ಯಾಂಕಿಂಗ್ ಪದ್ಧತಿ ಪ್ರಾರಂಭಿಸಿವೆ. ಸಿಟಿಬ್ಯಾಂಕ್ ಈ ಸೇವೆಯಲ್ಲಿ ಅಗ್ರಗಣ್ಯ. ನಾನೊಮ್ಮೆ ಫೋನ್ ಮಾಡಿದರೆ ಬ್ಯಾಂಕಿನ ಕಂಪ್ಯೂಟರ್ ನನ್ನ ಸೆಕ್ಯೂರಿಟಿ ನಂಬರ್, ನನ್ನ ತಾಯಿಯ ಹೆಸರು

ಮುಂತಾದ ವಿವರಗಳನ್ನು ತಿಳಿದು ನನ್ನ ಖಾತೆಗಳಿಗೆ ಸಂಪರ್ಕ ನೀಡುತ್ತದೆ. ನಾನಾಗ ಒಂದು ಖಾತೆಯಿಂದ ಇನ್ನೊಂದು ಖಾತೆಗೆ ಹಣ ವರ್ಗಾಯಿಸಬಹುದು. ಲೆಕ್ಕಗಳ ವಿವರ ತಿಳಿಯಬಹುದಲ್ಲದೇ ಹಿಂದಿನ ಐದು ಚೆಕ್ಕುಗಳ ಪಾವತಿ ಬಗ್ಗೆ ಕಂಡುಕೊಳ್ಳಬಹುದು. ಕಂಪ್ಯೂಟರ್ ನಿಂದ ಸರಿಯಾದ ಪರಿಹಾರ ದೊರೆಯದಿದ್ದರೆ ಮನುಷ್ಯ ಸಂಪರ್ಕ ಪಡೆಯಬಹುದು. ಆದರೆ ಸದ್ಯಕ್ಕೆ ಈ ಸಂಪರ್ಕದ ಮೂಲಕ ಡ್ರಾಫ್ಟ್ ಗಳನ್ನಾಗಲೀ, ಮನಿ ಆರ್ಡರ್ ಆಗಲೀ, ಟ್ರಾವಲರ್ಸ್ ಚೆಕ್ ಮುಂತಾದ ಸೌಲಭ್ಯಗಳನ್ನಾಗಲಿ ಪಡೆಯಲು ಸಾಧ್ಯವಿಲ್ಲ. ಆದರೆ ಸಣ್ಣಪುಟ್ಟ ವಿಚಾರಗಳನ್ನು ಈ ಸಂಪರ್ಕ ಸಾಧನವು ಪರಿಹರಿಸುವುದರಿಂದ ಬ್ಯಾಂಕಿಗೆ ಸಾಕಷ್ಟು ತಲೆನೋವು ಕಡಿಮೆಯಾಗುತ್ತದೆ.

ಬುಲೆಟನ್ ಬೋರ್ಡ್ಸ್‌ನ್ನು ನಾನಾವಿಧ ಕೆಲಸಗಳಿಗೆ ಉಪಯೋಗಿಸಬಹುದು. ಉದಾಹರಣೆಗೆ ಬಳ್ಳಾರಿ ಜಿಲ್ಲೆಯ ಕ್ರಿಕೆಟ್ ಆಸಕ್ತರು ಇಂತಹ ಬುಲೆಟನ್ ಬೋರ್ಡು ಸ್ಥಾಪಿಸಬಹುದು. ಒಂದು ಕಂಪ್ಯೂಟರ್, ಮಾಡಮ್ ಮತ್ತು ಟೆಲಿಫೋನ್ ಇದ್ದವರು ಬುಲೆಟನ್ ಬೊರ್ಡ್ ಸಂಪರ್ಕಿಸಿ ಕ್ರಿಕೆಟ್ ಬಗ್ಗೆ ಮಾಹಿತಿ ಪಡೆಯಬಹುದು. ಜಾಹೀರಾತು ಹಾಕಬಹುದು. ಕ್ರಿಕೆಟ್ ಬಗ್ಗೆ ಚರ್ಚೆ ನಡೆಸಬಹುದು. ಈ ಸೌಲಭ್ಯಕ್ಕೆ ತಕ್ಕ ನಿಯಮಗಳನ್ನು ರಚಿಸಬಹುದು ಮತ್ತು ಅದಕ್ಕಾಗಿ ಫೀ ನಿರ್ಧರಿಸಬಹುದು. ನನ್ನ ಮಗ ವಿಜಯ (೧೬ ವರ್ಷ) ಹಲವಾರು ಬುಲೆಟನ್ ಬೋರ್ಡುಗಳಿಗೆ ಸದಸ್ಯನಾಗಿದ್ದಾನೆ. ಈ ಎಲ್ಲಾ ಬೋರ್ಡುಗಳು ವಿಶೇಷ ಕ್ರಿಯೆಗಳಿಗೆ ಮಾತ್ರ ಮೀಸಲಾಗಿವೆ. ಮತ್ತು ಸದಸ್ಯತ್ವವೂ ಕಂಪ್ಯೂಟರ್ ಕ್ರೀಡೆಗಳಲ್ಲಿ ಆಸಕ್ತರಿಗೆ ಮೀಸಲಾಗಿರುತ್ತದೆ. ಸದಸ್ಯರು ಹೊಸ ಆಟಗಳ ಬಗ್ಗೆ ತಿಳಿದುಕೊಳ್ಳುತ್ತಾರೆ. ಆಟದ ಸಮಸ್ಯೆಗಳನ್ನು ತೀರ್ಮಾನಿಸಿಕೊಳ್ಳುತ್ತಾರೆ ಮತ್ತು ಬೇರೆ ಬೇರೆ ಆಟಗಳನ್ನು ವಿನಿಮಯ ಮಾಡಿಕೊಳ್ಳುತ್ತಾರೆ. ಒಂದು ಡಿಸ್ಕೆಟ್ ಮೂಲಕ ಆಟವನ್ನು ಕಳಿಸುವ

ಬದಲಾಗಿ ಮಾಡಮ್ ಮೂಲಕ ಆಟವನ್ನು ತಿಳಿಸುತ್ತಾರೆ. ಈ ಅನುಕೂಲದಿಂದ ಆಟಗಳನ್ನು ಕೊಳ್ಳುವ (ಪ್ರತಿ ಆಟದ ಬೆಲೆ ೧೦೦ ಡಾಲರ್) ಬದಲು ವಿನಿಮಯ ಮಾಡಿಕೊಳ್ಳುತ್ತಾರೆ ಮತ್ತು ಹೆಚ್ಚು ಆಟಗಳನ್ನು ಆಡುತ್ತಾರೆ.

ಈ ಮಾಹಿತಿ ರಾಜಮಾರ್ಗದಲ್ಲಿ ಯಾರು ಸವಾರಿ ಮಾಡಬಹುದು

ನಿಮ್ಮಲ್ಲೊಂದು ಕಂಪ್ಯೂಟರ್, ಮೊಡಮ್, ಮಾನಿಟರ್ ಮತ್ತು ಟೆಲಿಫೋನ್ ಇದ್ದರೆ ಅಮೇರಿಕೆಯಲ್ಲಿ ಸದ್ಯ ಬರಲಿರುವ ಮಾಹಿತಿ ರಾಜಮಾರ್ಗದಲ್ಲಿ ಸವಾರಿ ಮಾಡಬಹುದು. ನಿಮ್ಮ ನಿಮ್ಮ ಬಳಕೆಯ ಪ್ರಮಾಣ ನಿಮ್ಮ ವ್ಯವಹಾರದ ಸ್ವರೂಪದ ಮೇಲೆ ನೀವು ಹಾಕಬೇಕಾದ ಬಂಡವಾಳ ಮತ್ತು ವಾರ್ಷಿಕ ವೆಚ್ಚ ನಿರ್ಭರವಾಗುತ್ತವೆ.

ಸದ್ಯ ಭಾರತದಲ್ಲಿ ಒಂದು ಸಾಧಾರಣ ಕಂಪ್ಯೂಟರ್ (ಎಟಿ ೨೮೬ ೪ ಮೆಗ್‌ರಾಮ್ ಮತ್ತು ಸಾಕಷ್ಟು ಹಾರ್ಡ್ ಡಿಸ್ಕ ಮೆಮೊರಿ) ಬೆಲೆ ರೂ.೩೮,೦೦೦. ಟೆಲಿಫೋನ್ ಸಂಪರ್ಕ ವೆಚ್ಚ ವಾರ್ಷಿಕ ರೂ.೩೦೦ ಆದೀತು. ಭಾರತದಲ್ಲಿ ಅನೇಕ ಕಂಪನಿಗಳು ಎಲೆಕ್ಟ್ರಾನಿಕ್ ಅಂಚೆ ಸೇವೆ ನೀಡುತ್ತವೆ. ಅವರು ನೀಡುವ ಸೇವೆ ಮತ್ತು ದರಗಳು ಭಿನ್ನವಾಗಿವೆ. ಇಂಡಿಯಾ ಆನಲೈನ್ ರೂ.೫೦೦೦ ವಾರ್ಷಿಕ ಚಂದಾ ಮತ್ತು ರೂ.೫೦೦೦ ಸೇವೆಗೆ ಮುಂಗಡ ಎಂದು ತೆಗೆದುಕೊಳ್ಳುತ್ತದೆ. ಈ ಸಂಪರ್ಕ ಜಾಲದಲ್ಲಿ ಭಾಗಿಯಾಗುವವರು ಹೆಚ್ಚಿನ ವಿದ್ಯುತ್ ಬಿಲ್ಲು, ಟೆಲಿಫೋನ್ ಬಿಲ್ಲು ಕೊಡಲು ಸಿದ್ಧರಿರಬೇಕು. ಅದರ ಜೊತೆಗೆ ನಿಮ್ಮ ಕಂಪ್ಯೂಟರ್‌ನ್ನು ಧೂಳು, ಬಿಸಿ ಮತ್ತು ತಾಪದಿಂಧ ಕಾಪಾಡಬೇಕಾದರೆ ಹವಾ ನಿಯಂತ್ರಣ ವ್ಯವಸ್ಥೆ ಇರಬೇಕು. ವಿದ್ಯುತ್ ನಿಲುಗಡೆ ಮತ್ತು ವೋಲ್ಟೇಜ್‌ನ ಹೆಚ್ಚು ಕಡಿಮೆಯಿಂದ ಕಂಪ್ಯೂಟರ್‌ಗೆ ಅಥವಾ ಅದರ ಹಾರ್ಡ್ ಡಿಸ್ಕಗೆ ಏನಾದರೂ ಆದರೆ ಭಾರೀ ವೆಚ್ಚ ಭರಿಸಬೇಕಾಗುವುದು. ಈ ಎಲ್ಲ ಆತಂಕಗಳನ್ನು ಗಮನಿಸಿದರೆ ಭಾರತದಲ್ಲಿ ಕಾರ್ಪೊರೇಷನ್‌ಗಳು, ಸರಕಾರಿ ಕಛೇರಿಗಳು,

ವಿಶ್ವವಿದ್ಯಾಲಯಗಳು ಮತ್ತು ಕೆಲ ಶ್ರೀಮಂತರು ಮಾತ್ರ ಈ ಮಾಹಿತಿ ರಾಜಮಾರ್ಗದಲ್ಲಿ ಸವಾರಿ ಮಾಡಬಹುದು. ಅಮೇರಿಕೆಯಲ್ಲಿ ಕೂಡಾ ಎಲ್ಲ ಸಂಪರ್ಕಜಾಲಗಳು ಏಕತ್ರವಾದ ಮೇಲೆ ದೊರೆಯಬಹುದಾದದ್ದು - ಮನೋರಂಜನೆ ಮತ್ತು ವ್ಯಾಪಾರ ಎಂದು ಈ ನಿಗಮಗಳು ಹೇಳುತ್ತವೆ. ಕೇಬಲ್ ಕಂಪನಿಗಳು ಸೂಕ್ತ ದರದಲ್ಲಿ ಮನೆಗಳಿಗೆ ೫೦೦ ಟಿ ವಿ ಚಾನೆಲ್ ನ ಭರವಸೆ ನೀಡುತ್ತಿವೆ.

ನೀವು ಟಿ.ವಿ ಕಾರ್ಯಕ್ರಮಗಳನ್ನು ನೋಡಿ ಮನರಂಜನೆ ಪಡೆಯುವುದರ ಜೊತೆಗೆ ಕೆಲ ಸಂಬಂಧಿತ ವಸ್ತುಗಳನ್ನು ಖರೀದಿಸಬಹುದು. ಉದಾಹರಣೆಗೆ ಡಿಸ್ನಿಯವರ ದಿಲಯನ್ ಕಿಂಗ್ ಚಿತ್ರವನ್ನು ಡಿಸ್ನಿ ಚಾನೆಲ್ ನಲ್ಲೂ ನೋಡುತ್ತಾ ಅದರ ವಿಡಿಯೋ ಟೇಪ್ ,ಪುಸ್ತಕ, ಸಂಗೀತದ ಟೇಪ್, ಟಿಷರ್ಟ್, ಪೋಸ್ಟರ್ಸ್, ಆಟಿಕೆ ಸಾಮಾನು, ವಿಡಿಯೋ ಆಟ ಇತ್ಯಾದಿಗಳನ್ನು ಖರೀದಿಸಬಹುದು. ಇನ್ನೊಂದು ಸಾಧ್ಯತೆಯೆಂದರೆ ನಿಮಗೆ ಬೇಕಾದ ವಿಡಿಯೋ ನೋಡುವುದು. ವಾರ್ನರ್ ಕಮ್ಯುನಿಕೇಷನ್ಸ್ ಸಂಸ್ಥೆಯಲ್ಲಿ ವಾರ್ನರ್ ಚಿತ್ರಗಳ ಮತ್ತು ಟಿ.ವಿ. ಕಾರ್ಯಕ್ರಮಗಳ ಅಗಾಧ ಸಂಗ್ರಹವಿದೆ. ನಿಮಗೆ ಬೇಕೆನಿಸಿದರೆ ಅವರ ಕ್ಯಾಟಲಾಗ್ ನಿಂದ ೧೯೫೫ ರಲ್ಲಿ ತಯಾರಾದ ಒಂದು ಚಿತ್ರವನ್ನು ಆರಿಸಿ ಕೆಲ ಗುಂಡಿಗಳನ್ನು ಒತ್ತುವುದರಿಂದ ಆ ಚಿತ್ರವನ್ನು ನೋಡಬಹುದು. ನೀವು ಇದಕ್ಕೆ ವಿಶೇಷ ಹಣ ನೀಡಬೇಕಾಗಬಹುದು. ಆದರೆ ನಿಮಗೆ ಬೇಕಾದದ್ದು ನಿಮ್ಮ ಬೆಚ್ಚನೆಯ ಮನೆಯಲ್ಲಿಯೇ ಸಿಗುತ್ತದೆ. ಸದ್ಯಕ್ಕೆ ಈ ಸೌಲಭ್ಯಗಳು ಸಿಗಬಹುದು. ಆಪ್ಟಿಕಲ್ ಫೈಬರ್ ವಾಹಕಗಳು, ಕಂಪ್ಯೂಟರ್, ವಿಸ್ತಾರವಾದ ಮಾರುಕಟ್ಟೆ ವ್ಯವಸ್ಥೆ ಮತ್ತು ದೊಡ್ಡ ಆಸಕ್ತ ಸಮುದಾಯವನ್ನು ಉಪಯೋಗಿಸಿ ಹಾಲಿವುಡ್ ನವರು ಅಗಾಧ ಲಾಭಗಳಿಸುವ ಸಾಧ್ಯತೆಗಳಿವೆ.

ವಿಷಯಗಳು ಮತ್ತು ಸಮಸ್ಯೆಗಳು

ಒಟ್ಟಿನಲ್ಲಿ ಈ ಮಾಹಿತಿ ರಾಜಮಾರ್ಗವು ಜನರ ಹೃದಯಗಳಿಗೆ

ಮನಸುಗಳಿಗೆ ಮತ್ತವರ ಜೇಬುಗಳಿಗೆ ವಿಲಾಸದ ಸೂತ್ರವಾಗಲಿದೆ. ಪ್ರಪಂಚದ ಸುತ್ತಮುತ್ತ ಶ್ರೀಮಂತರು ಮಾತ್ರ ಈ ವಿಲಾಸೀ ರಾಜಮಾರ್ಗದಲ್ಲಿ ಸವಾರಿ ಮಾಡುತ್ತಾರೆ. ದೊಡ್ಡ ನಿಗಮಗಳು ಮತ್ತು ಅವರ ಬೆನ್ನಿಗಿರುವ ಪಶ್ಚಿಮದ ಸರಕಾರಗಳು ಈ ಸಂಪರ್ಕ ಜಾಲವನ್ನು ಜಗತ್ತಿನೆಲ್ಲ ಕಡೆ ಹರಡುವ ಹುನ್ನಾರದಲ್ಲಿದ್ದಾರೆ. ಈ ಶೋಷಿತ ಪ್ರಪಂಚದಲ್ಲಿ ಬಲ್ಲವರ ಮತ್ತು ಬಲ್ಲಿದರ ಕೈಯಲ್ಲಿ ಈ ದುಬಾರಿ ತಂತ್ರಜ್ಞಾನವು ಒಂದು ಹೊಸ ಆಯುಧವೆಂಬುದನ್ನು ಗಮನಿಸಬೇಕು. ಭಾರತೀಯ ಕಂಪನಿಗಳ ಮತ್ತು ವಿದೇಶೀ ಕಂಪನಿಗಳ ನಡುವೆ ವಿದ್ಯುತ್ ಉತ್ಪಾದನೆಗಾಗಲೀ ಉಪಗ್ರಹ ಟಿವಿಗಾಗಲೀ ಆಗುವ ಒಪ್ಪಂದಗಳಂತೆಯೇ ಈ ವ್ಯಾಪಾರವನ್ನು ಪರಿಗಣಿಸಬಹುದು. ಎಟಿ ಮತ್ತು ಟಿ, ವಾರ್ನರ್ ಕಮ್ಯುನಿಕೇಶನ್ಸ್ ರೂಪರ್ಟ್ ಮಾರ್ಡೋಕ್‌ರ ನಿವ್ಸ್ ಕಾರ್ಪೋರೇಷನ್ ಸಂಸ್ಥೆಗಳು ಭಾರತದ ಅಂತರ್ಯಕ್ಕೆ ತಾಂತ್ರಿಕವಾಗಿ ಮತ್ತು ಬೌದ್ಧಿಕವಾಗಿ ಧಾಳಿ ನಡೆಸಿವೆ.

ಮನುಕುಲದ ಅಭಿವೃದ್ಧಿಗೆ ತೊಂದರೆಯಾಗಿರುವುದು ಸಂಪನ್ಮೂಲಗಳ ಕೊರತೆಯಿಂದಲ್ಲ, ಆದರೆ ಸಂಪನ್ಮೂಲಗಳ ಸಮಾನ ವಿತರಣೆಯ ಅಭಾವದಿಂದ. ಔದ್ಯೋಗಿಕವಾಗಿ ಮುಂದುವರೆದ ಮತ್ತು ರಾಜಕೀಯವಾಗಿ ಬಲಿಷ್ಠವಾದ ಉತ್ತರದ ದೇಶಗಳಿಗೂ ದಕ್ಷಿಣದ ದೇಶಗಳಿಗೂ ನಡುವೆ ಅಗಾಧ ಕಂದಕಗಳಿವೆ. ಕೊಂಚ ಪರಿಶೀಲಿಸಿದರೆ ಉತ್ತರದಲ್ಲಿಯು ನಿರುದ್ಯೋಗ, ಅರ್ಧ ಉದ್ಯೋಗ ಮತ್ತು ಬಡತನ ದಿನೇ ದಿನೇ ಹೆಚ್ಚುತ್ತದೆ. ದಕ್ಷಿಣದಲ್ಲಿಯೂ ಅಗಾಧ ಜನಸಂಖ್ಯೆಯು ನಿಕೃಷ್ಟ ಬಡತನದಲ್ಲಿದೆ. ಈಗ ದೊಡ್ಡ ದೊಡ್ಡ ಲಾಭ ಕೋರ ಕಂಪನಿಗಳು ಹಂಚಿಕೆ ಹಾಕಿದಂತೆ ಸಾಧ್ಯವಾಗುವ ಮಾಹಿತಿಯ ರಾಜಮಾರ್ಗದಿಂದ ಬೆಳೆಯುತ್ತಿರುವ ಬಡತನವನ್ನಾಗಲೀ ಹೆಚ್ಚುತ್ತಿರುವ ಅಸಮಾನತೆಯನ್ನಾಗಲೀ ಸುಧಾರಿಸಲು ಸಾಧ್ಯವಿಲ್ಲ. ವಾಸ್ತವಿಕವಾಗಿ ಈ ಕಂದರಗಳು ಹೆಚ್ಚುತ್ತವೆ. ಅನೇಕ

ಕೋಟ್ಯಾಂತರ ಜನ ಮಾಹಿತಿಯೇ ಇಲ್ಲದ ಬಡವರಾಗುತ್ತಾರೆ.

ರಾಷ್ಟ್ರೀಯ ಸರಕಾರಗಳು ಇಂತಹ ಸಂಪರ್ಕಜಾಲಗಳನ್ನು ನಿರ್ಮಿಸುವ ನಿರ್ಧಾರ ಮಾಡುವ ಮೊದಲು ಎರಡು ಮೂಲಭೂತ ವಿಷಯಗಳ ಬಗ್ಗೆ ಚಿಂತಿಸಬೇಕು. ಮೊದಲನೆಯದಾಗಿ ನಮ್ಮ ಗಡಿಗಳಿಂದ ಆಚೆ ಈಚೆ ಪ್ರವಹಿಸುವ ಮಾಹಿತಿಯ ನಿಯಂತ್ರಣ ಎರಡನೆಯದು ವೈಯಕ್ತಿಕ ರಹಸ್ಯ. ಈ ಬಗ್ಗೆ ಸಂಕ್ಷಿಪ್ತವಾಗಿ ಚರ್ಚಿಸೋಣ.

ಅಗಾಧವಾದ ಮಾಹಿತಿಯನ್ನು ಸಂಗ್ರಹಿಸಿ ಎಲ್ಲ ಗಡಿಗಳಿಂದಾಚೆ ಮಾಹಿತಿ ಕಳಿಸಲು ಶಕ್ತವಾದ ಕಂಪ್ಯೂಟರ್‌ಗಳಿಂದ ಕ್ಲಿಷ್ಟ ರಾಜಕೀಯ ಸಮಸ್ಯೆಗಳು ಸೃಷ್ಟಿಯಾಗುತ್ತವೆ. ಆರ್ಥಿಕ ವಿಷಯಗಳ ಬಗ್ಗೆ ಸಂಗ್ರಹಿಸಿದ ಮಾಹಿತಿಯನ್ನು ಸರಕಾರಗಳು ಸೈನಿಕ ಮತ್ತು ಆರ್ಥಿಕ ಸಹಾಯದ ವಿಷಯದಲ್ಲಿ ಉಪಯೋಗಿಸಬಹುದಾಗಿದೆ. ೧೯೭೯ ರಲ್ಲಿ ಇರಾನಿನ ಷಾ ಅವರನ್ನು ಕ್ರಾಂತಿಕಾರಿಗಳು ಆಯಾತುಲ್ಲಾ ಖೊಮೆನಿಯವರ ನೇತೃತ್ವದಲ್ಲಿ ಪದಭ್ರಷ್ಟರನ್ನಾಗಿ ಮಾಡಿದರು. ಪ್ರೆಸಿಡೆಂಟ್ ಕಾರ್ಟರ್ ಆಗ ಅಮೇರಿಕೆಯ ಬ್ಯಾಂಕುಗಳಲ್ಲಿ ಮತ್ತು ಅವುಗಳ ಪ್ರಪಂಚದಾದ್ಯಂತ ಶಾಖೆಗಳಲ್ಲಿದ್ದ ಇರಾನಿನ ಹಣ ಹಾಗೂ ಆಸ್ತಿಯನ್ನು ಜಪ್ತು ಮಾಡಿದರು.

ಎಲ್ಲಾ ಬ್ಯಾಂಕು ಲೆಕ್ಕಗಳು ಕಂಪ್ಯೂಟರೀಕರಣವಾಗಿದ್ದರಿಂದಲೂ ಅತ್ಯಂತ ವೇಗದಿಂದ ಎಲ್ಲ ಶಾಖೆಗಳಿಗೆ ಸುದ್ದಿ ತಲುಪಿಸಲು ಸಾಧ್ಯವಾದ್ದರಿಂದಲೂ ಅಧ್ಯಕ್ಷರ ಆಜ್ಞೆಯು ತಕ್ಷಣ ಜಾರಿಗೆ ಬಂದು ಇರಾನಿಯರು ಎಲ್ಲೂ ತಮ್ಮ ಹಣ ತೆಗೆಯಲು ಸಾಧ್ಯವಾಗಲಿಲ್ಲ. ಇದಕ್ಕಿಂತ ಇರಕಟ್ಟಿನ ಪ್ರಸಂಗ ಟೆಲಿಪೋನಿನಿಂದಾಗಬಹುದು. ವಿದೇಶಿ ಕಂಪನಿಗಳು ನಿಮ್ಮ ದೂರವಾಣಿ ಜಾಲವನ್ನು ನಿರ್ವಹಿಸುತ್ತಿದ್ದರೆ ರಾಷ್ಟ್ರೀಯ ಭದ್ರತೆಗೆ ಸುಲಭವಾಗಿ ಧಕ್ಕೆ ಬರಬಹುದು. ಮುಂದುವರಿದ ಅರ್ಥ ವ್ಯವಸ್ಥೆಯಲ್ಲಿ ದೂರವಾಣಿಯೇ ಸಂಪರ್ಕದ ಕೇಂದ್ರ. ಇಂತಹ ಸಂಪರ್ಕ ಜಾಲದ ಹತೋಟಿಯು ವಿದೇಶಿಯರ ಕೈಯಲ್ಲಿದ್ದರೆ ಯಾವ ಕ್ಷಣದಲ್ಲಾದರೂ ನಿಮ್ಮ

ದೇಶದ ವ್ಯಾಪಾರ. ಅರ್ಥ ವ್ಯವಸ್ಥೆಗೆ ಧಕ್ಕೆ ಒದಗುವಂತೆ ಕೆಲಕಾಲ ಇಡೀ ಸಂಪರ್ಕ ವ್ಯವಸ್ಥೆಯನ್ನೇ ನಿಲ್ಲಿಸಬಹುದು. ಉದಾಹರಣೆಗೆ ೧೯೭೦ ರಲ್ಲಿ ಚಿಲಿ ದೇಶದಲ್ಲಿ ಸಮಾಜವಾದಿ ನಾಯಕ ಅಯೆಂಡೆ ಅಧಿಕಾರಕ್ಕೆ ಬಂದರು. ಆ ದೇಶದಲ್ಲಿ ಟೆಲಿಫೋನ್ ವ್ಯವಸ್ಥೆಯು ವಿದೇಶಿ ಕಂಪನಿಯಾದ IT ಮತ್ತು T ಅವರ ಕೈಯಲ್ಲಿತ್ತು. ಅಯೆಂಡೆ ಅವರು ಈ ಕಂಪನಿಯ ವ್ಯವಹಾರವನ್ನು ಮೊಟಕುಗೊಳಿಸಿ ಟೆಲಿಫೋನ್ ವ್ಯವಸ್ಥೆಯನ್ನು ಸ್ವದೇಶೀಕರಣ ಮಾಡಲು ಯೋಚಿಸಿದರು. ಇದರಿಂದ ಅಮೇರಿಕೆಗೆ ಕೋಪ ಬಂದಿತಲ್ಲದೆ ಮುಂದಿನ ಮೂರು ವರುಷಗಳಲ್ಲಿ ಸಿ ಐ ಎ ಬೆಂಬಲದಿಂದ ರಕ್ತ ಕ್ರಾಂತಿಯ ಮೂಲಕ ಅಯೆಂಡೆ ಅಧಿಕಾರ ಅಂತವಾಯಿತು.

ದೂರವಾಣಿ ತಂತ್ರಜ್ಞಾನದಲ್ಲಿ ಆಗಿರುವ ಸಾಧನೆಗಳಿಂದ ಕೇಳುವ ವಿಧಾನಗಳು ತುಂಬಾ ಸುಧಾರಿಸಿವೆ. ಒಂದು ಕಟ್ಟಡದ ಇಪ್ಪತ್ತೈದನೆಯ ಅಂತಸ್ತಿನಲ್ಲಿ ನಡೆಯುತ್ತಿರುವ ಸಂಭಾಷಣೆಯನ್ನು ಕೆಳಗೆ ಬೀದಿಯಲ್ಲಿ ನಿಲ್ಲಿಸಿದ ವಾಹನದಲ್ಲಿ ಕುಳಿತು ಕೇಳಬಹುದಾಗಿದೆ. ಇದಕ್ಕಾಗಿ ತಂತ್ರಜ್ಞಾನ ಸಿದ್ಧವಾಗಿದೆ. ಒಂದು ಸುಧಾರಿತ ಸಾಧನದ ಮೂಲಕ ಗಾಜಿನ ಕಿಟಕಿಗಳಿಗೆ ಬಡಿಯುತ್ತಿರುವ ಧ್ವನಿ ತರಂಗಗಳನ್ನು ಹಿಡಿಯುತ್ತಾರಷ್ಟೆ. ಇತ್ತೀಚೆಗೆ ಸಿ ಐ ಎ ದವರು ಅಮೇರಿಕದಲ್ಲಿ ಪ್ರತಿ ದೂರವಾಣಿಯಲ್ಲಿ ಒಂದು ಮೈಕ್ರೋಚಿಪ್ ಹಾಕಲು ಯೋಚಿಸಿದ್ದರು. ಇದರಿಂದ ಅಮೇರಿಕೆಯ ಪ್ರತಿ ಮನೆ, ಅಂಗಡಿಯಲ್ಲೂ ಒಬ್ಬ ಬೇಹುಗಾರನಿರುತ್ತಿದ್ದ. ಆದರೆ ಈ ಸಲಹೆಗೆ ವಿಸ್ತೃತ ವಿರೋಧ ದೇಶದೆಲ್ಲಾ ಕಡೆಯಿಂದ ಬಂದ ಕಾರಣ ಈ ಸಲಹೆ ಕಡತದಲ್ಲಿಯೇ ಸಮಾಧಿಯಾಯಿತು. ಎಲ್ಲಾ ಸಂಪರ್ಕ ಸಾಧನಗಳ ಅಭಿವೃದ್ಧಿ ಮತ್ತು ಸುಧಾರಣೆಯಿಂದ ಮನೆ ಮನೆಯ ಗೌಪ್ಯಕ್ಕೆ ಧಕ್ಕೆಯಾಗಿದೆ. ಪಶ್ಚಿಮದಲ್ಲಿ ಟೆಲಿಫೋನ್ ಮೂಲಕ ಕಾಮಶಾಸ್ತ್ರದ ರಂಜನೆ ಪಡೆಯಬಹುದಾಗಿದೆ. ಇದಕ್ಕೆ ಫೋನ್ ಸೆಕ್ಸ್ ಎಂದು ಜಾಹೀರಾತು ಮಾಡಲಾಗುತ್ತಿದೆ. ಸುಂದರ ತರುಣ ತರುಣಿಯರು ಟಿ.ವಿ. ಮತ್ತು


INFORMATION
SUPERHIGHWAY

ರೇಡಿಯೋ ಜಾಹೀರಾತುಗಳ ಮೂಲಕ ಅವರಿಗೆ ಫೋನ್ ಮಾಡಲು ಪುಸಲಾಯಿಸುತ್ತಾರೆ. ಇದಕ್ಕೂ ಹಣ ತೆರಬೇಕು. ೧೯೫೦ ರಲ್ಲಿ ಇಂತಹ ಸೇವೆಗಳು ಪ್ರಾರಂಭವಾದಾಗ ತಂದೆ ತಾಯಿಗಳಿಗೆ ತಿಳಿಯದಂತೆ ಮಕ್ಕಳು ಫೋನ್ ಮಾಡಿದರು. ಇದರಿಂದ ಹಿರಿಯರು ನೊಂದುಕೊಂಡರಲ್ಲದೇ ಹೊರಬಾರದ ಟೆಲಿಫೋನ್ ಬಿಲ್ ತೆತ್ತರು. ಸದ್ಯ ಕಂಪ್ಯೂಟರ್ ಆಟಗಳಲ್ಲಿ ಲೈಂಗಿಕ ರೂಪಗಳನ್ನು ಕಾಣಬಹುದಾಗಿದೆ. ಈ ರೂಪಗಳನ್ನು ದೊಡ್ಡದು ಸಣ್ಣದು ಮಾಡಿ ಬೇರೆ ಬೇರೆ ತರಹೆಯ ಸಂಯೋಜನೆಯನ್ನು ಮಾಡಬಹುದು. ಕೆಲವರಿಗೆ ವಿನೋದವೆನಿಸಿದರೆ ತಂದೆ ತಾಯಿಗಳಿಗೆ ಅನೇಕ ಸಮಸ್ಯೆಗಳಿಗೆ ಕಾರಣವಾಗುತ್ತದೆ. ಯಾವ ವಯಸ್ಸಿನ ಮಕ್ಕಳಿಗೆ ಈ ಆಟಗಳು ಸರಿ. ಇಂತಹ ಆಟಗಳು ಅವಶ್ಯವೆ? ಮನೆಗಳಲ್ಲಿ ನಿರ್ಬಂಧಿಸಿದರೆ ಮಕ್ಕಳು ಹಿರಿಯರಿಗೆ ತಿಳಿಯದಂತೆ ಈ ಆಟಗಳನ್ನಾಡಲಾರರೆ? ಅರಿಯದ ಮಕ್ಕಳು ಕಳ್ಳತನದಿಂದ ಪ್ಲೇಬಾಯ್ ಅಥವಾ ಬೇರಾವುದೇ ಲೈಂಗಿಕ ವಿಷಯಗಳನ್ನು ಓದುವುದಕ್ಕಿಂತ ಇದೇನು ಬೇರಲ್ಲ. ಆದರೆ ಕುಟುಂಬದಲ್ಲಿ ಇದರಿಂದ ಸಮಸ್ಯೆಗಳು ಹುಟ್ಟುತ್ತವೆ ಮತ್ತು ಹಿರಿಯರ ಮೌಲ್ಯಗಳು ಪ್ರಶ್ನಿಸಲ್ಪಡುತ್ತವೆ.

ಸಮಾರೋಪ

ಬಂಡವಾಳ ಪದ್ಧತಿಯಲ್ಲಿ ಯಾವಾಗಲು ಬಿಕ್ಕಟ್ಟು ವ್ಯವಸ್ಥಿತವಾಗಿ ಉದ್ಭವಿಸುತ್ತಲೇ ಇರುತ್ತದೆ. ಈ ಬಿಕ್ಕಟ್ಟಿಗೆ ಉತ್ತರವೆಂದರೆ ಸಂಶೋಧನೆ. ಮಾರ್ಕ್ಸನು ನೂರಾ ಐವತ್ತು ವರುಷಗಳ ಹಿಂದೆಯೇ ಇದನ್ನು ಗುರುತಿಸಿದ್ದನು. ಕಳೆದ ಇಪ್ಪತ್ತು ವರುಷಗಳಿಂದ ಸಂಪರ್ಕ ಸಾಧನಗಳು ಸಾಕಷ್ಟು ಸುಧಾರಿಸಿವೆ. ಈಗ ಕಂಪ್ಯೂಟರ್ ಮತ್ತು ಸಂಪರ್ಕ ಸಾಧನಗಳು ಎಲ್ಲಾ ಸಂಶೋಧನೆಗಳನ್ನು ಬಳಸಿ ನಿರ್ಮಿಸಬಹುದಾದ ಬೃಹತ್ ಸಂಪರ್ಕಜಾಲದ ಕಲ್ಪನೆ ಪಶ್ಚಿಮದಲ್ಲಿ ಆವಿರ್ಭವಿಸಿದೆ. ಈ ಎಲ್ಲಾ ಜಾಲಗಳ ನಿರ್ಮಾಣಕ್ಕೆ ಕೋಟಿ ಕೋಟಿ ಡಾಲರುಗಳು ಅವಶ್ಯಕತೆ ಇದೆ. ಅಷ್ಟೊಂದು

ಬಂಡವಾಳ ದೊರೆಯುವ ಸಾಧ್ಯತೆಗಳು ಕಾಣುತ್ತಿಲ್ಲ. ಅಮೇರಿಕೆಯಲ್ಲಿ ಸದ್ಯದ ಕನಸೇನೆಂದರೆ ಒಂದು ಮಹಾ ತಾಂತ್ರಿಕ ಸಂಪರ್ಕ ಜಾಲದ ಮೂಲಕ ಅಮೇರಿಕೆಯ ಪ್ರತಿ ಮನೆ, ಕಛೇರಿ, ಗ್ರಂಥಾಲಯ, ಶಾಲೆಗಳನ್ನು ತಲುಪುವುದು. ಅದಕ್ಕೆ ರಾಜಮಾರ್ಗ ಎಂಬ ಹೆಸರು. ಆದರೆ ಈ ರಾಜಮಾರ್ಗದಲ್ಲಿ ಪರ್ಯಟಿಸಲು ನೀಡಬೇಕಾದ ಸುಂಕದ ಬಗ್ಗೆ ಯಾರೂ ಚಿಂತಿಸುತ್ತಿಲ್ಲ. ಸಮಾನತೆ, ಸಮತೂಕ, ಸಮಭಾಗ ಮತ್ತು ಸಾರ್ವಜನಿಕ ಒಳಿತಿಗಾಗಿ ಸಂಪರ್ಕ ಎಂಬ ತತ್ವಗಳನ್ನು ಮೂಟೆಕಟ್ಟಿ ನಾಗೊಂದಿಗೆಗೆ ಕಳಿಸಲಾಗಿದೆ. ಆದರೆ ಈ ರಾಜಮಾರ್ಗದ ಬಗ್ಗೆ ಸಮೂಹ ಮಾಧ್ಯಮಗಳಲ್ಲಿ ನಿತ್ಯ ಕಾಣಬರುವುದು, ಕೇಳುವುದು ಶುದ್ಧ ಪ್ರಚಾರ ಮಾತ್ರ. ಈ ರಾಜಮಾರ್ಗದ ನಿರ್ಮಾಣಕ್ಕೆ ತಗಲುವ ವೆಚ್ಚವೇನು? ಯಾರಿಗಾಗಿ ಈ ಎಲ್ಲ ಫಜೀತಿ? ಈ ಪ್ರಶ್ನೆಗಳಿಗೆ ಉತ್ತರವೇ ಇಲ್ಲ. ಈ ಹೊಸ ವ್ಯವಸ್ಥೆಯಿಂದ ಮತ, ಅಂತಸ್ತು, ಬಣ್ಣ, ದೇಶ, ಲಿಂಗ ಭೇದವಿಲ್ಲದೆ ಎಲ್ಲರೂ ಲಾಭ ಪಡೆಯುವಂತಾಗಬೇಕು. "ಆದರೆ ಈ ಪ್ರಪಂಚದಲ್ಲಿ ಅನುಕೂಲಗಳು ಎಲ್ಲರಿಗೂ ಸಮಾನವಾಗಿ ಸಿಗುವುದಿಲ್ಲ. ಎಲ್ಲರೂ ಹೇಳುವುದೊಂದು ಮಾಡುವುದೊಂದು. ಸದ್ಯದ ವ್ಯವಸ್ಥೆಯಲ್ಲಿ ಅಸಮಾನತೆ ತಾನೇ ತಾನಾಗಿ ಪ್ರತಿಫಲಿತವಾಗುತ್ತದೆ." ಎಂದು ಎಲ್ಲ ಬಲ್ಲ ನಾಗರೀಕರಿಗೆ ಗೊತ್ತು. ನಿಜವೇನೆಂದರೆ ಕೊಳ್ಳಬಲ್ಲವನು ಪ್ರಪಂಚದ ಎಲ್ಲೇ ಇರಲಿ ಈ ಶತನಾಮದ ಅಂತ್ಯದ ವೇಳೆಗೆ ಈ ರಾಜಮಾರ್ಗದ ಅನೇಕ ಮುಖ್ಯ ಉಪಯೋಗಗಳನ್ನು ಪಡೆಯಬಲ್ಲ.

ಭಾರತವೀಗ ಸಂಪರ್ಕ ವ್ಯವಸ್ಥೆಯನ್ನು ಖಾಸಗೀಕರಣ ಮಾಡುವ ಕಡೆ ಧಾವಿಸುತ್ತಿದೆ. ಇಲ್ಲಿರುವ ಬ್ರಷ್ಟಾಚಾರ, ಆರ್ಥಿಕ ವ್ಯವಸ್ಥೆಯ ಕೊಳಕುತನ ಮತ್ತು ಸರಕಾರದ ಅನೇಕ ಮುಖ ಪತನಗಳಿಗೆ ತಾಂತ್ರಿಕ ನಿವಾರಣೆಗಳು ಲಭ್ಯವಿಲ್ಲ. ಈಗ ಯೋಚಿಸಿರುವಂತೆಯೇ ನಡೆದರೆ ಮುಂಬರುವ ಶತಮಾನದಲ್ಲಿ ಈ ದೇಶದ ನೂರು ಕೋಟಿ ಜನರಲ್ಲಿ ದೊಡ್ಡ ಸಂಖ್ಯೆಯ

ಜನ ಎತ್ತಿನ ಗಾಡಿಗಳಲ್ಲಿಯೇ ಉಳಿಯುತ್ತಾರೆ. ಕೇವಲ ಕೆಲವೇ ವರ್ಗದ ಜನರು ಮಾಹಿತಿ ರಾಜಮಾರ್ಗದ ವೇಗ, ಆನಂದ ಮತ್ತು ಅನುಕೂಲಗಳನ್ನು ಪಡೆಯುತ್ತಾರೆ. ಆಪ್ಟಿಕಲ್ ಫೈಬರ್ ತಂತ್ರಜ್ಞಾನದಿಂದ ಕೆಲ ವರ್ಗದ ಜನ ಲಾಭಕೋರತನ, ಅತಿ ಆಸೆ, ಸ್ವಂತ ಸುಖದ ಲೋಲುಪತೆಯಲ್ಲಿ ಮುಳುಗಿದರೆ ಈ ನಾಡಿನ ಈ ಸಮಾಜದ ರಾಷ್ಟ್ರೀಯವಾದ ಅನನ್ಯಭಾವಕ್ಕೆ ಧಕ್ಕೆಯಾಗಬಹುದಾಗಿದೆ.

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪ್ರಸಾರಾಂಗದ ಪ್ರಕಟಣೆಗಳು

ಮಂಟಪ ಮಾಲೆ

೧.	ಜಾನಪದ ಕ್ಷೇತ್ರಕಾರ್ಯ	ಪುರುಷೋತ್ತಮ ಬಿಳಿಮಲೆ
೨.	ಪುರಾಣ	ಓ. ಎಲ್. ನಾಗಭೂಷಣ ಸ್ವಾಮಿ
೩.	ಸಂಶೋಧನೆಯ ಎರಡು ಹೆಜ್ಜೆಗಳು	ಎಚ್. ಎಂ. ಮರುಳಸಿದ್ಧಯ್ಯ
೪.	ಭಾಷಾಂತರ	ಓ. ಎಲ್. ನಾಗಭೂಷಣ ಸ್ವಾಮಿ
೫.	ಕೀಟಗಳು ಬದುಕುವ ದಾರಿ	ಪಿ. ಶಿವರಾಮ ರೈ
೬.	ಸ್ಫೋಟವಾದ	ಮಲ್ಲೇಪುರಂ ಜಿ. ವೆಂಕಟೇಶ
೭.	ಅಭಿವೃದ್ಧಿ ಮೀಮಾಂಸೆ	ಟಿ. ಆರ್. ಚಂದ್ರಶೇಖರ್
೮.	ಜಮೀನ್ದಾರಿ ವ್ಯವಸ್ಥೆ ಮತ್ತು ತೆಲುಗು ಸಾಹಿತ್ಯ	ಕುಂ. ವೀರಭದ್ರಪ್ಪ
೯.	ಸತ್ತ ಮೇಲೆ ಸಮಾಜ ಸೇವೆ	ಎಸ್. ಜೆ. ನಾಗಲೋಟಿಮಠ
೧೦.	ನೆಲದ ಮರೆಯ ನಿದಾನ	ಚಂದ್ರಶೇಖರ ಕಂಬಾರ
೧೧.	ಕಾಯಕ ದಾಸೋಹ	ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು
೧೨.	ಗ್ರಾಮೀಣ ನ್ಯಾಯ	ಎಚ್. ವಿ. ನಾಗೇಶ್
೧೩.	ಫರ್ಡಿನಾಂಡ್ ಕಿಟೆಲ್ ಜೀವನ ಸಾಧನೆ- ಕೋಶ ರಚನೆ	ವಿಲ್ಯಂ ಮಾಡ್ತ
೧೪.	ದೇಹ ಕ್ರಿಯೆಯ ಸೋಜಿಗಗಳು	ವಸಂತ ಕುಲಕರ್ಣಿ
೧೫.	ಕನ್ನಡ ವ್ಯಾಕರಣ ಪರಂಪರೆ	ಡಿ. ಎನ್. ಶಂಕರಭಟ್
೧೬.	ನಮ್ಮ ಜನಪದ ಕತೆಗಳು	ಹಿ. ಶಿ. ರಾಮಚಂದ್ರೇಗೌಡ
೧೭.	ಮಾತೃಪೂಜೆ	ಟಿ. ನ. ಮಂಗಳಾ
೧೮.	ವಚನಗಳಲ್ಲಿ ಪ್ರಸಾದದ ಪರಿಕಲ್ಪನೆ	ಎನ್. ಜಿ. ಮಹದೇವಪ್ಪ

ವಿವರಗಳಿಗೆ ಬರೆಯಿರಿ

ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ,
ಕಾಮಲಾಪುರ - ೫೮೩ ೨೨೧

ಕನ್ನಡ ವಿಶ್ವವಿದ್ಯಾಲಯ, ಹಂಪಿ
ಕೊಠಡಿ ಸಂಖ್ಯೆ ೨೧೧,
ತಾಂತ್ರಿಕ ಶಿಕ್ಷಣ ಇಲಾಖಾ ಕಟ್ಟಡ
೨ನೇ ಮಹಡಿ, ಅರಮನೆ ರಸ್ತೆ
ಬೆಂಗಳೂರು ೫೬೦ ೦೦೧

ಮಂಟಪ ಮಾಲೆ

೧೯

ಹಂಪಿಯ ಕನ್ನಡ ವಿಶ್ವವಿದ್ಯಾಲಯ ವಿದ್ಯೆಯನ್ನು ಕಲಿಯಲು ಅನುವು ಮಾಡಿಕೊಡುವ ಒಂದು ಸಂಸ್ಥೆಯೇ ಹೊರತು ಅದು ವಿದ್ಯೆಯನ್ನು ಕಲಿಸುವ ಸಂಸ್ಥೆಯಲ್ಲ. ನಮ್ಮ ನಾಡಿನಲ್ಲಿ ಹಳೆಯ ಕಾಲದ ತಿಳುವಳಿಕೆಯೊಂದಿದೆ, ಅಲ್ಲದೆ ಪಶ್ಚಿಮದಿಂದ ಹರಿದು ಬರುತ್ತಿರುವ ಜ್ಞಾನಪ್ರವಾಹವೂ ಇದೆ. ಈ ಎರಡೂ ತಿಳುವಳಿಕೆಗಳು ಒಂದಕ್ಕೊಂದು ಸಂಧಿಸಿ ಬೆಳಕನ್ನು ಉಂಟು ಮಾಡಿವೆ, ಜೊತೆಗೆ ದಿಗ್ಭ್ರಮೆಯನ್ನೂ ತಂದಿವೆ. ಈ ತಿಳುವಳಿಕೆಗಳ ವಿವೇಕದ ವಿನಿಯೋಗ ಇಂದು ಅಗತ್ಯವಾಗಿದೆ. ಇಂಥ ವಿನಿಯೋಗಕ್ಕಾಗಿ ಹೊಸಬಗೆಯ ಶಾಸ್ತ್ರ ವಿಧಾನಗಳು ನಮಗಿಂದು ಬೇಕಾಗಿವೆ. ಕನ್ನಡ ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ಸಂಶೋಧನೆಯ ಗುರಿಯೆಂದರೆ ಈ ಶಾಸ್ತ್ರ ವಿಧಾನಗಳ ನಿರ್ಮಾಣ.

ನಾವು ನಮ್ಮ ನಮ್ಮಲ್ಲಿ ವಿಚಾರ ವಿನಿಮಯ ನಡೆಸಲು, ಒಬ್ಬರ ಅರಿವನ್ನು ಎಲ್ಲರೂ ಹಂಚಿಕೊಳ್ಳಲು ವಿಶ್ವವಿದ್ಯಾಲಯದಲ್ಲಿ ಪ್ರತಿವಾರ ಮಂಟಪ ಎಂಬ ಕಾರ್ಯಕ್ರಮ ನಡೆಸುತ್ತೇವೆ. ಅಲ್ಲಿ ಹೊಮ್ಮಿದ ವಿಚಾರಗಳು ನಮ್ಮ ಅರಿವನ್ನು ಹೆಚ್ಚಿಸಿದಂತೆ ನಿಮಗೂ ಲಾಭದಾಯಕವಾಗುವವೆಂಬ ನಂಬಿಕೆಯಿಂದ ಕಡಿಮೆ ಬೆಲೆಯ ಕಿರು ಪುಸ್ತಿಕೆಗಳ ರೂಪದಲ್ಲಿ ಅವನ್ನು ಪ್ರಕಟಿಸಿ ನಿಮ್ಮ ಕೈಗಿಡುತ್ತಿದ್ದೇವೆ. ಇದರ ಲೇಖಕರಾದ ಶ್ರೀ ಮಂಜುನಾಥ ಪೆಂಡಕೂರು ಅವರು ಅಮೆರಿಕಾದ ನಾರ್ತ್‌ವೆಸ್ಟರ್ನ್ ವಿಶ್ವವಿದ್ಯಾಲಯದಲ್ಲಿ ಸಂವಹನ ಮತ್ತು ಅಭಿವೃದ್ಧಿ ವಿಭಾಗದಲ್ಲಿ ಪ್ರಾಧ್ಯಾಪಕ ಹಾಗೂ ನಿರ್ದೇಶಕರಾಗಿದ್ದಾರೆ. ಭಾರತೀಯ ಚಲನಚಿತ್ರದ ಉದ್ಯಮ ಕುರಿತು ಇಂಗ್ಲಿಷಿನಲ್ಲಿ ಉತ್ತಮವಾದ ಕೃತಿಯನ್ನು ರಚಿಸಿದ್ದಾರೆ. ಜೊತೆಗೆ ದೂರದರ್ಶನ ಮತ್ತು ಆಕಾಶವಾಣಿ ಮಾಧ್ಯಮಗಳ ಕುರಿತು ಸಹ ಆಳವಾದ ಅಧ್ಯಯನ ಮಾಡಿದ್ದಾರೆ. ಬಳ್ಳಾರಿ ಜಿಲ್ಲೆಯವರಾದ ಶ್ರೀ ಪೆಂಡಕೂರು ಅವರು 'ಮಾಹಿತಿ ರಾಜಮಾರ್ಗ' ಕುರಿತು ನಮ್ಮ ವಿಶ್ವವಿದ್ಯಾಲಯದ ಮಂಟಪಮಾಲೆಯಲ್ಲಿ ನೀಡಿದ ಈ ಉಪನ್ಯಾಸವನ್ನು ಪ್ರಕಟಿಸಲು ನಮಗೆ ಸಂತೋಷವಾಗುತ್ತದೆ.

ಡಾ. ಚಂದ್ರಶೇಖರ ಕಂಬಾರ

ಕುಲಪತಿಯವರು